<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ- ಶ್ರೀ. ಕೆ.ಎಸ್.ಎಂ. ವಕೀಲರಿಂದ ಆರೋಪಿಯ ಪರವಾಗಿ</u>

9. ಆರೋಪಿಯು ನನಗೆ 15 ವರ್ಷಗಳಿಂದ ಪರಿಚಯ. ಆರೋಪಿಯ ತಂದೆ ಹಾಗೂ ನಾನು ಒಂದು ಸಂಘ ಸಂಸ್ಥೆಯಲ್ಲಿ ಇದ್ದೇವು ಆಗ ಆರೋಪಿ ಅಲ್ಲಿಗೆ ಬರುತ್ತಿದ್ದರು ಹಾಗಾಗಿ ಪರಿಚಯ. ಆರೋಪಿಯು ಮತ್ತೊಬ್ಬರಿಗೆ ಸಾಲ ಮರು ಪಾವತಿ ಮಾಡಲು ನನ್ನ ಬಳಿ ಸಾಲ ಪಡೆದಿರುತ್ತಾರೆ. ನಾನು ಚಿನ್ನವನ್ನು ಅಡವಿಟ್ಟು, ಆರೋಪಿಯಿಂದ ಯಾವುದೇ ದಾಖಲಾತಿಯನ್ನು ಪಡೆಯದೇ ಆತನ ಸಾಲ ನೀಡಿರುತ್ತೇನೆ. ನಾನು ದಿನಸಿ ವಸ್ತುಗಳನ್ನು ಲೈನ್ ಸೇಲ್ ಮಾಡುತ್ತೇನೆ. ನಾನು ತಿಂಗಳಿಗೆ ರೂ. 50,000/- ಆಧಾಯ ಹೊಂದಿರುತ್ತೇನೆ. ನಾನು ಆರೋಪಿಗೆ ನೀಡಿದ ಸಾಲಕ್ಕೆ ಬಡ್ಡಿ ಇರುವುದಿಲ್ಲ. ನಾನು ಅಡವಿಟ್ಟ ಚಿನ್ನಕ್ಕೆ ಬಡ್ಡಿ ಇರುತ್ತದೆ.

10. ನಾನು ಆರೋಪಿಗೆ ರೂ. 7,50,000/- ಹಣವನ್ನು ಸಾಲವಾಗಿ ನೀಡಿದ್ದು, ಸದರಿ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಆ ಪೈಕಿ ರೂ. 1,50,000/- ಹಣವನ್ನು ಮರು ಪಾವತಿ ಮಾಡಿರುತ್ತಾರೆ. ಆರೋಪಿಗೆ ನಾನು ಸಾಲ ನೀಡುವಾಗ ನಾನು, ಆರೋಪಿ, ಆತನ ತಂದೆ ಹಾಗೂ ತಾಯಿ ಹಾಜರಿದ್ದರು. ನಾನು ಅದಾಯ ತೆರಿಗೆ ಪಾವತಿ ಮಾಡುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ಸಾಲ ನೀಡುವ ಸಮಯದಲ್ಲಿ ಯಾವುದೇ ಕರಾರನ್ನು ಮಾಡಿಕೊಂಡಿರುವುದಿಲ್ಲ. ನಿಪಿ 1ರ ಮೊತ್ತವನ್ನು ಸಾಲವಾಗಿ ನೀಡುವ ಆರ್ಥಿಕ ಸಾಮರ್ಥ್ಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎ.ಪಿ.ಎಲ್. ಕಾರ್ಡ ಹೊಂದಿರುತ್ತೇನೆ. ನನಗೆ ಲೈನ್ ಸೇಲ್ ವ್ಯವಹಾರ ಅಲ್ಲದೇ ಕೃಷಿ ಭೂಮಿ ಇದೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ